ತಹಶೀಲ್ದಾರರು ಸರ್ಕಾರ ನಿಗದಿಪಡಿಸಿದ ದರಕ್ಕೆ ಮಾರಾಟ ಮಾಡಿಸಲು ಕ್ರಮ ಕೈಗೊಂಡಿದ್ದಾರೆ.

ಈ) ಪಡಿತರ ವ್ಯವಸ್ಥೆಯಲ್ಲಿ ಮೋಸ ಆಗುತ್ತಿರುವ ಬಗ್ಗೆ ದೂರುಗಳು ಇರುವುದಿಲ್ಲ ಹಾಗೂ ಪ್ರಕರಣಗಳು ದಾಖಲು ಆಗಿರುವುದಿಲ್ಲ.

581(523) ಶ್ರೀ ಬಿ.ಎಸ್. ಪಾಟೀಲ್ (ಹಿರೇಕೆರೂರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಹೊಸದಾಗಿ ಬಸವೇಶ್ವರ ಸಕ್ಕರೆ ಕಾರ್ಖಾನೆಗೆ ಸರ್ಕಾರದ ಎನ್.ಸಿ.ಡಿ.ಸಿ. ಅನುಮತಿ ದೊರಕಿದೆಯೇ;

ಆ) ರೈತರಿಂದ ಕೊಟ್ಟಿಯಾಗಿ ಶೇರು ಹಣವನ್ನು ವ್ಯವಸಾಯ ಬ್ಯಾಂಕುಗಳಿಂದ ಸಾಲ ಮಾಡಿಸಿ ಇಲ್ಲಿಯವರೆವಿಗೂ ಶೇರು ಪತ್ರ ವಿತರಿಸದೇ ಇದ್ದುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಶೇರು ಪತ್ರವನ್ನು ವಿತರಿಸದೇ ಇದ್ದ ರೈತರ ಹಣವನ್ನು ಹಿಂದಿರುಗಿಸಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಇದು ಎನ್.ಸಿ.ಡಿ.ಸಿ. ಯ ಪರಿಶೀಲನೆಯಲ್ಲಿದೆ.

ಆ, ಇ) ಕಾರ್ಖಾನೆಯ ಉಪನಿಯಮದಂತೆ ಸದಸ್ಯರುಗಳ ವರ್ಗೀಕರಣ ಮಾಡಿಕೊಂಡು ಬಾಕಿ ಇರುವ ಎಲ್ಲ ಸದಸ್ಯರಿಗೆ ಶೇರು ಪ್ರಮಾಣ ಪತ್ರ ವಿತರಿಸುವಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.

582(961) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎಷ್ಟು ಬೆಳೆಗಳಿಗೆ ಕೇಂದ್ರ ಸರ್ಕಾರ ಬೆಂಬಲ ಬೆಲೆ ನಿರ್ಧಾರ ಮಾಡಿದೆ;

ಆ) ರಾಜ್ಯ ಸರ್ಕಾರ ಎಷ್ಟು ಬೆಳೆಗಳ ಬಗ್ಗೆ ಈ ಕ್ರಮವನ್ನು ಆಚರಣೆಗೆ ತಂದಿದೆ;

ಇ) ಎಷ್ಟು ಕಡೆ ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭಿಸಲಾಗಿದೆ;

ಈ) ಪ್ರಾರಂಭಿಸಿದ್ದರೆ, ಯಾವ ಯಾವ ಬೆಳೆ ಎಷ್ಟು ಖರೀದಿ ಮಾಡಿದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಕೇಂದ್ರ ಸರ್ಕಾರವು 14 ಬೆಳೆಗಳಿಗೆ ಬೆಂಬಲ ಬೆಲೆ ನಿರ್ಧಾರ ಮಾಡಿದೆ.

ಆ) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಮುಖಾಂತರ 4 ಬೆಳೆಗಳು : ಮೆಕ್ಕೆ ಜೋಳ, ಭತ್ತ, ರಾಗಿ ಮತ್ತು ಜೋಳ.

ಇ) ರಾಜ್ಯದ 19 ಜಿಲ್ಲೆಗಳಲ್ಲಿ ಒಟ್ಟು 82 ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಈ) ಈ ಕೆಳಕಂಡಂತೆ ಬೆಳಗಳನ್ನು ಖರೀದಿ ಮಾಡಲಾಗಿದೆ:–

ಮೆಕ್ಕೆ ಜೋಳ	:	244010.49 ಮೆ.ಟನ್ಸ್
ಭತ್ತ	:	6208.587 ಮೆ.ಟನ್ಸ್
ರಾಗಿ	:	1278.943 ಮೆ.ಟನ್ಸ್
ಜೋಳ	:	ಇನ್ನು ಮಾರುಕಟ್ಟಿಗೆ ಬಂದಿರುವುದಿಲ್ಲ

583(962) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಸ್ಥಾಪಿಸಿರುವ ತೊಗರಿ ಮೋರ್ಡ್‌ನ ಕಾರ್ಯವ್ಯಾಪ್ತಿಯೇನು, ಇದರ ಕಾರ್ಯಕ್ಷೇತ್ರವೆಷ್ಟು;

ಆ) ಭಾರಿ ತೊಗರಿ ಬೆಳೆಗೆ ಸೀಮಿತವಾಗಿದೆಯೇ;

ಇ) ಇತರ ಬೇಳೆ ಕಾಳುಗಳಿಗೆ ಅನ್ವಯವಾಗುತ್ತದೆಯೇ;

ಈ) ಈ ವರ್ಷದ ಕಾರ್ಯಯೋಜನೆ ಮತ್ತು ಇದಕ್ಕೆ ಒದಗಿಸಲಾದ ಹಣವೆಷ್ಟು;

ಉ) ರೈತರಿಗೆ ತೊಗರಿ ಕಾಳು ಇಟ್ಟುಕೊಳ್ಳಲು ಕೃಷಿ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾಲಯ ಯಾವ ತಂತ್ರಜ್ಞಾನ ಒದಗಿಸಿದೆ?

ಶ್ರೀ ಕೆ. ಶ್ರೀನಿವಾಸ್‌ಗೌಡ (ಕೃಷಿ ಸಚಿವರು)

ಅ) ರಾಜ್ಯ ಸರ್ಕಾರ ಸ್ಥಾಪಿಸಿರುವ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ ಇದರ ಕಾರ್ಯವ್ಯಾಪ್ತಿ ಕರ್ನಾಟಕ ರಾಜ್ಯವಾಗಿದ್ದು, ಕಾರ್ಯಕ್ಷೇತ್ರ ಕೂಡ ಕರ್ನಾಟಕ ರಾಜ್ಯವಾಗಿರುತ್ತದೆ.

ಆ) ಇಲ್ಲ.

ಇ) ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ ಇದು ಬರೀ ತೊಗರಿ ಬೆಳೆಗೆ ಸೀಮಿತವಾಗಿರದೇ ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಬೆಳೆಗಳು ಸೇರಿದಂತೆ ಎಲ್ಲಾ ಬೇಳೆ–ಕಾಳು ಬೆಳೆಗಳಿಗೆ ಸೀಮಿತವಾಗಿದೆ.

ಈ) ಈ ವರ್ಷದ ಅಂದರೆ 2004–05 ಸಾಲಿನಲ್ಲಿ 50.000 ಕ್ವಿಂಟಾಲ್ ತೊಗರಿ ಖರೀದಿಸುವುದು ಮಂಡಳಿಯ ಕಾರ್ಯ ಯೋಜನೆಯಾಗಿದೆ. ಈ ಕುರಿತು ಮಂಡಳಿಯಲ್ಲಿ ಇರುವ ರೂ. 5 ಕೋಟಿ ಹಣವಿದೆ.

ಉ) ತೊಗರಿಕಾಳು ಸಂಗ್ರಹಣೆ ಕುರಿತಂತೆ ರೈತರಿಗೆ ಕೃಷಿ ಇಲಾಖೆಯು ನೀಡಿರುವ ತಾಂತ್ರಿಕ ಮಾಹಿತಿ ಇಂತಿದೆ.

1. ಕಾಳಿನ ತೇವಾಂಶವನ್ನು ಶೇ. 10ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಿಸುವುದು.
2. ಔಡಲ (ಹರಳು) ಎಣ್ಣೆಯನ್ನು ತೊಗರಿ ಕಾಳುಗಳಿಗೆ ಲೇಪಿಸುವುದು.
3. ತೊಗರಿಕಾಳಿನೊಂದಿಗೆ ಬೇವಿನ ಎಲೆಗಳನ್ನು ಬೆರೆಸುವುದು.
4. ಕಾಳುಗಳನ್ನು ಪಕ್ಕಾ ಕೋಠಿಯಲ್ಲಿ ಸಂಗ್ರಹಿಸಿಡುವುದು.